**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 12.01.2024</u>**

**<u>ಮುಂದುವರಿದ ಪಾಟೀ ಸವಾಲು : ಶ್ರೀ.ಬಿ ಎಮ್ ಜಿ ವಕೀಲರಿಂದ ಆರೋಪಿ ಪರವಾಗಿ :</u>**

1. ಈ ಪ್ರಕರಣವನ್ನು ದಾಖಲಿಸುವ ಮೊದಲು ಸಿಸಿ.558/2017 ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣ ವನ್ನು ಹೆಚ್ಚುವರಿ ಸಿವಿಲ್ ನ್ಯಾಯಾಲಯ ದೇವನಹಳ್ಳಿ ವಾಪಸ್ಸು ಮಾಡಿತು ಎಂದರೆ ಸರಿ. ದಿಃ25.09.2018 ರಿಂದ 30 ದಿನಗಳ ಒಳಗಾಗಿ ಈ ಪ್ರಕರಣ ದಾಖಲಿಸಬೇಕೆಂದ ಆದೇಶ ಆಗಿತ್ತು ಎಂದರೆ ಸಾಕ್ಷಿ ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಿಃ25.11.2018 ರಂದು ಸಲ್ಲಿಸಿದ್ದೇನೆ ಎಂದರೆ ಸರಿ. ಈ ಪ್ರಕರಣವನ್ನು 30 ದಿನಗಳ ಒಳಗಾಗಿ ನ್ಯಾಯಾಲಯದ ಆದೇಶದಂತೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ವಿಳಂಬ ಆದ ಬಗ್ಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಗೊತ್ತಿದೆ ಎಂದು ನುಡಿಯುತ್ತಾರೆ. ನಮ್ಮ ವಕೀಲರು ಈ ಪ್ರಕರಣಗದಲ್ಲಿ ಸಲ್ಲಿಸಿರುವ ಅರ್ಜಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ರೀತಿ ಕಾಲ ವಿಳಂಬದ ಬಗ್ಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣ ಈ ಪ್ರಕರಣ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿ ನನಗೆ ಯಾವುದೇ ರೀತಿಯಿಂದಲೂ ಪರಿಚಯ ಇರುವುದಿಲ್ಲ ಸಾಕ್ಷಿ ಮುಂದುವರಿದು ಅವರ ಅಳಿಯ ಪರಿಚಯ ಎಂದು ನುಡಿಯುತ್ತಾರೆ. ಆರೋಪಿ ಅಂಗಡ್ ಎಂಬ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ಆರೋಪಿಯ ಮನೆಗೆ ಹೋಗಿರುವುದಿಲ್ಲ ಎಂದರ ಸರಿ. ಅದೇ ರೀತಿ ಆರೋಪಿ ನಮ್ಮ ಮನೆಗೆ ಬಂದಿರುವುದಿಲ್ಲ ಎಂದರೆ ಸರಿ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯ ಮನೆಯಲ್ಲಿ ಯಾರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ಆ ರೀತಿ ನಾನು ಟ್ರಾಕ್ಟರ್ ಮೂಲಕ ಗೊಬ್ಬರವನ್ನು ಸಾಗಾಟ ಮಾಡುವ ಕೆಲಸಕ್ಕೆ ಹೋಗುತ್ತೇನೆ. ನಾನು ಒಂದು ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ. ನಾನು ಸಂಪದಾನೆ ಮಾಡಿದ ಹಣವನ್ನು ನನ್ನ ಖಾತೆಗೆ ಹಾಕುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಯಾಕೆ ಸಂಪದಾನೆ ಮಾಡಿದ ಹಣವನ್ನು ನನ್ನ ಖಾತೆಗೆ ಹಾಕುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಸಂಪಾದನೆ ಮಾಡಿದ ಹಣ ಮನೆ ಮತ್ತು ಟ್ರಾಕ್ಟರ್ ಗೆ ಖರ್ಚಾಗುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಗೊಬ್ಬರ ಸಾಗಾಟ ಮಾಡುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ.

3. ನಮ್ಮ ಗ್ರಾಮದಲ್ಲಿ ಶ್ರೀರಾಮಯ್ಯ ನವರ ಮಗ ಮಂಜುನಾಥ್ ಇದ್ದಾರೆ ಎಂದರೆ ಸರಿ. ಸದರಿಯವರು ನನಗೆ ಸಂಬಂದಿಕರು. ನಮ್ಮ ಮತ್ತು ಅವರ ನಡುವೆ ಕೇವಲ ಮಾತುಕತೆ ಮಾತ್ರ ಇರುತ್ತದೆ. ಸದರಿಯವರು ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ, ಆರೋಪಿಗೆ ಸೇರಿದ್ದ ನಿವೇಶನ ನಮ್ಮ ಗ್ರಾಮದಲ್ಲಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿವೇಶನದ ಬಗ್ಗೆ ಶ್ರೀರಾಮಯ್ಯ ನವರ ಮಗ ಮಂಜುನಾಥ್ ಮತ್ತು ಆರೋಪಿಯ ನಡುವೆ ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸಾದಹಳ್ಳಿಯಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿರುತ್ತಾರೆ. ಆ ರೀತಿ ಆರೋಪಿ ಬ್ಯಾಂಕ್ ಖಾತೆ ತೆರೆಯುವಾಗ ನಾನು ಜೊತೆಗೆ ಹೋಗಿರಲಿಲ್ಲ. ಶ್ರೀರಾಮಯ್ಯ ನವರ ಮಗ ಮಂಜುನಾಥ್ ಆರೋಪಿಯ ಬ್ಯಾಂಕ್ ಖಾತೆ ಮಾಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಓದಲು ಬರೆಯಲು ಬರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಅನಕ್ಷರಸ್ತೆಯಾದ ಕಾರಣ ಓದು ಬರಹ ಬರುವುದಿಲ್ಲ ಮತ್ತು

ಬ್ಯಾಂಕ್ ವ್ಯವಹಾರ ಬರುವುದಿಲ್ಲ ಎಂದರೆ ಸಾಕ್ಷಿ ನನಗೆ ಬರುವುದಿಲ್ಲ ಅವರಿಗೆ ಬರುತ್ತದೆ ಎಂದು ಹೇಗೆ ಹೇಳಲಿ ಎಂದು ನುಡಿಯುತ್ತಾರೆ. ಶ್ರೀರಾಮಯ್ಯ ನವರ ಮಗ ಮಂಜುನಾಥ್ ರವರು ಆರೋಪಿ ಹೆಸರಿನಲ್ಲಿ ಬ್ಯಾಂಕ್ ಖಾತೆಯನುನ ಮಾಡಿಸಿ ಆ ಖಾತೆಯಿಂದ 3 ಸಹಿ ಮಾಡಿದ ಚೆಕ್ ಗಳನ್ನು ಪಡೆದುಕೊಂಡು ಆ ಪೈಕಿ 1 ಚೆಕ್ ನ್ನು ನನ್ನ ಕಡೆ ಈ ಪ್ರಕರಣದಲ್ಲಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**